ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ
ಓಎಸ್ ನಂಃ ೧೭೦/೨೦೧೬

ದಿನಾಂಕಃ ೧೩-೦೨-೨೦೧೯ ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- ಶ್ರೀ  ಸಿ ಎಸ್ ಎಂ ವಕೀಲರಿಂದಃ-

ನಾನು ದಿನಾಂಕ ೦೬-೦೭-೧೯೭೭ರಲ್ಲಿ ಜನಿಸಿದ್ದೇನೆ. ದಿನಾಂಕ ೧೨-೦೨-೧೯೬೮ ರಂದು ದಾವಾಸ್ತಿಯನ್ನು ನನ್ನ ತಂದೆ ಗಣಪತಿಯವರು ೨ನೇ ಪ್ರತಿವಾದಿ ಹಾಗೂ ಅವರ ಮೃತ ಸಹೋದರ ತಮ್ಮಯ್ಯನಿಗೆ ಹಾಗೂ ೩ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು, ಉಳಿದ ವಾದಿಯರು ಹಾಗೂ ೬ ಮತ್ತು ೭ನೇ ಪ್ರತಿವಾದಿಯರು ಒಟ್ಟಿಗೆ ಸೇರಿ ಓಎಸ್.೩೮/೧೯೭೭ರಲ್ಲಿ ೨ನೇ ಪ್ರತಿವಾದಿ ಹಾಗೂ ಅವರ ಸಹೋದರರ ಮೇಲೆ ಒಂದು ದಾವೆಯನ್ನು ಹಾಕಿದ್ದೆವು ಎನ್ನುವುದು ಸರಿ. ಆ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ೭ನೇ ಪ್ರತಿವಾದಿ ಆ ದಾವೆಯಲ್ಲಿ ನಮ್ಮ ಗಾರ್ಡಿಯನ್ ಆಗಿದ್ದರು ಎಂದರೆ ಸರಿ. ಆ ಡಿಕ್ರಿಯಲ್ಲಿ ಆ ದಾವೆಯ ಆಸ್ತಿಯನ್ನು ವಾಪಸ್ಸು ನಮಗೆ ಕೊಡಬೇಕೆಂದು ಡಿಕ್ರಿಯಾಗಿತ್ತು ಎನ್ನುವುದು ಸರಿ. ನಾವು ಎಕ್ಸಿಕ್ಯೂಷನ್.೭೮/೧೯೭೯ರಂತೆ ಅರ್ಜಿಯನ್ನು ಹಾಕಿದ್ದೆವು ಎಂದರೆ ಸಾಕ್ಷಿ ನಾನು ಅದಕ್ಕೆ ಪಕ್ಷಗಾರನಲ್ಲ ಎನ್ನುತ್ತಾರೆ. ಆ ಪ್ರಕರಣದಲ್ಲೂ ೭ನೇ ಪ್ರತಿವಾದಿ ನಮ್ಮ ಗಾರ್ಡಿಯನ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ.

ಆ ಪ್ರಕರಣದಲ್ಲಿ ದಿನಾಂಕ ೨೧-೦೩-೧೯೮೯ರಂದು ನಮ್ಮ ಪರವಾಗಿ ೭ನೇ ಪ್ರತಿವಾದಿ ಹಾಗೂ ೬ ಮತ್ತು ೭ನೇ ಪ್ರತಿವಾದಿಯರು ಖುದ್ದಾಗಿ ಮುತ್ತಣ್ಣ ಮತ್ತು ಸಹೋದರರೊಂದಿಗೆ ರಾಜಿ ಮಾಡಿಕೊಂಡು ರಾಜಿ ಅರ್ಜಿ ಸಲ್ಲಿಸಿದ್ದರು ಎನ್ನುವುದು ಸರಿಯಲ್ಲ.

ಕೊಳ್ಳಿಮಾಡ ಪೂವಯ್ಯ ಎಂಬುವವರಿಗೆ ನಮ್ಮ ತಂದೆ ಸರ್ವೆ ನಂ.೧೨೭, ೧೨೪ ಮತ್ತು ೧೫೦ರಲ್ಲಿ ಒಂದು ಎಕರೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ಸರಿ. ಆ ರೀತಿ ನಡೆದ ರಾಜಿಯಲ್ಲಿ ಮುತ್ತಣ್ಣ ಮತ್ತು ಸಹೋದರರು ಆರು ಸಾವಿರ ರೂಪಾಯಿ ಹಣವನ್ನು ಹಾಗೂ ಒಂದು ಎಕರೆ ಜಾಗವನ್ನು ಕೊಡಬೇಕು ಎಂದು ಒಪ್ಪಂದ ಆಗಿತ್ತು ಎಂದರೆ ಸಾಕ್ಷಿ ಆ ರೀತಿ ಅವರು ಕೊಟ್ಟಿರುವುದಿಲ್ಲ ಎನ್ನುತ್ತಾರೆ. ರಾಜಿ ಒಪ್ಪಂದದ ಪ್ರಕಾರ ಕೊಳ್ಳಿಮಾಡ

ಪೂವಯ್ಯನವರಿಂದ ಅವರಿಗೆ ಮಾರಾಟ ಮಾಡಿದ ಆಸ್ತಿಯನ್ನು ನಾಲ್ಕು ಸಾವಿರ ರೂಪಾಯಿ ಹಣವನ್ನು ಕೊಟ್ಟು ಮರಳಿ ಪಡೆದುಕೊಂಡಿದ್ದೇವೆ ಎನ್ನುವುದು ಸರಿ. ಈ ಬಗ್ಗೆ ನಾವು ರಿಕನ್ವೆಯನ್ಸ್ ಪತ್ರವನ್ನು ಕೂಡ ಮಾಡಿಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಕುರಿತು ಹಕ್ಕನ್ನು ಮುತ್ತಣ್ಣ ಮತ್ತು ಸಹೋದರರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ತಿಯ ಸ್ವಾಧೀನ ಈಗ ಮುತ್ತಣ್ಣನವರು ಮಾರಾಟ ಮಾಡಿರುವವರ ಕೈಯಲ್ಲಿ ಇರುತ್ತದೆ. ದಾವಾಸ್ತಿಯ ಸ್ವಾಧೀನ ನಮ್ಮ ಬಳಿ ಇರುವುದಿಲ್ಲ.

ಮುತ್ತಣ್ಣ ಹಾಗೂ ಅವರ ಸಹೋದರರು ದಾವಾಸ್ತಿಯನ್ನು ೧ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ೧ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎನ್ನುವುದು ಸರಿ.

ದಾವಾಸ್ತಿಯ ಮಾರುಕಟ್ಟೆಯ ಬೆಲೆ ೪೦ ಲಕ್ಷ ರೂಪಾಯಿ ಇರುತ್ತದೆ ಎನ್ನುವುದು ಸರಿಯಲ್ಲ. ದಾವಾಸ್ತಿ ನಮ್ಮ ಪ್ರಕಾರ ೨೫ ರಿಂದ ೩೦ ಲಕ್ಷ ರೂಪಾಯಿ ಬೆಲೆಬಾಳುತ್ತದೆ. ನಾವು ದಾವೆಯಲ್ಲಿ ಸರಿಯಾಗಿ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

ಸಾಕ್ಷಿದಾರರ ಸಹಿಃ

ಪಿಡಬ್ಲ್ಯೂ-೧.